ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಸ್ವಾತಂತ್ರ್ಯದ ಅಮೃತ ಮಹೋತ್ಸವ

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

**ಸಂಖ್ಯೆ: ಕವಿಪ್ರನಿನಿ/ಬಿ16/5607(V)/2000-01** ದಿನಾಂಕ : 19 NOV 2022

ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ),
ಕಾರ್ಯ ಮತ್ತು ಪಾಲನಾ ವೃತ್ತಗಳು,
**ಬೆಸ್ಕಾಂ/ಸೆಸ್ಕ್/ಮೆಸ್ಕಾಂ/ಹೆಸ್ಕಾಂ/ಜೆಸ್ಕಾಂ.**

ಮಾನ್ಯರೆ,

**ವಿಷಯ:** ಕವಿಪ್ರನಿನಿ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳ ಅಧ್ಯಾಯ-6 ರ ಕ್ರಮ ಸಂಖ್ಯೆ: 12(ಬಿ)(1) ಕೋಟಾದಡಿಯಲ್ಲಿ ನೌಕರರಿಗೆ ಪದೋನ್ನತಿ ನೀಡುವ ಬಗ್ಗೆ.

**ಉಲ್ಲೇಖ:** 1. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ16/5607(2)/2000-01, ದಿನಾಂಕ: 14.10.2022.
2. ರಿಟ್ ಅರ್ಜಿ ಸಂಖ್ಯೆ: 20991/2022 ಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಮಾನ್ಯ ಉಚ್ಛ ನ್ಯಾಯಾಲಯವು ನೀಡಿರುವ ದಿನಾಂಕ: 16.11.2022 ರ ಮಧ್ಯಂತರ ಆದೇಶ.

*****

ಕವಿಪ್ರನಿನಿ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳ ಅಧ್ಯಾಯ-6 ರ ಕ್ರಮ ಸಂಖ್ಯೆ: 12(ಬಿ) (1) ರಲ್ಲಿ ಸೇವೆಯಲ್ಲಿರುವ ನೌಕರರಿಗೆ ಮೀಸಲಿರಿಸಿದ ಶೇ.10 ರ ಕೋಟಾದಲ್ಲಿ ಕಿರಿಯ ಇಂಜಿನಿಯರ್(ವಿ) ಹುದ್ದೆಯ ಬಡ್ತಿಗೆ ಸಂಬಂಧಿಸಿದಂತೆ, ಅಂತರ್ ವೃತ್ತ ವರ್ಗಾವಣೆ ಹೊಂದಿರುವಂತಹ ನೌಕರರನ್ನು ಜ್ಯೇಷ್ಠತೆಗೆ ಪರಿಗಣಿಸುವ ಬಗ್ಗೆ ಉಲ್ಲೇಖ-1 ರ ದಿನಾಂಕ: 14.10.2022 ರ ಸುತ್ತೋಲೆಯಲ್ಲಿ ಸ್ಪಷ್ಟೀಕರಣವನ್ನು ನೀಡಲಾಗಿತ್ತು.

ನಿಗಮದ ಸದರಿ ಸುತ್ತೋಲೆಯ ವಿರುದ್ಧ ಶ್ರೀ.ನವೀನ್ ಕುಮಾರ್ ಮತ್ತು ಇತರರು ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ: 20991/2022 ಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಮಾನ್ಯ ಉಚ್ಛ ನ್ಯಾಯಾಲಯವು, ದಿನಾಂಕ: 16.11.2022ರ ಮಧ್ಯಂತರ ಆದೇಶದಲ್ಲಿ, ನಿಗಮದ ದಿನಾಂಕ: 14.10.2022 ರ ಸುತ್ತೋಲೆಗೆ ತಡೆಯಾಜ್ಞೆಯನ್ನು ನೀಡಿರುತ್ತದೆ.

ಈ ಹಿನ್ನಲೆಯಲ್ಲಿ, ಕವಿಪ್ರನಿನಿ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳ ಅಧ್ಯಾಯ-6 ರ ಕ್ರಮ ಸಂಖ್ಯೆ: 12(ಬಿ) (1) ರಲ್ಲಿ ಸೇವೆಯಲ್ಲಿರುವ ನೌಕರರಿಗೆ ಮೀಸಲಿರಿಸಿದ ಶೇ.10 ರ ಕೋಟಾದಲ್ಲಿ ಕಿರಿಯ ಇಂಜಿನಿಯರ್ (ವಿ) ಹುದ್ದೆಯ ಬಡ್ತಿ ನೀಡುವ ಪ್ರಕ್ರಿಯೆಯನ್ನು, ನಿಗಮದಿಂದ ಮುಂದಿನ ನಿರ್ದೇಶನ ನೀಡುವವರೆಗೂ ಸ್ಥಗಿತಗೊಳಿಸುವಂತೆ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು
(ಆಡಳಿತ ಮತ್ತು ಮಾ.ಸಂ)

**ಪ್ರತಿಯನ್ನು ಮಾಹಿತಿಗಾಗಿ:**

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ, ಸೆಸ್ಕ್, ಮೆಸ್ಕಾಂ, ಹೆಸ್ಕಾಂ, ಜೆಸ್ಕಾಂ.
2. ಎಲ್ಲಾ ಪ್ರಧಾನ ವ್ಯವಸ್ಥಾಪಕರು(ಆ. ಮತ್ತು ಮಾಸಂ), ಬೆಸ್ಕಾಂ, ಸೆಸ್ಕ್, ಮೆಸ್ಕಾಂ, ಹೆಸ್ಕಾಂ, ಜೆಸ್ಕಾಂ.
3. ಎಲ್ಲಾ ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು, ಕಾರ್ಯ ಮತ್ತು ಪಾಲನಾ ವೃತ್ತಗಳು, ಬೆಸ್ಕಾಂ, ಸೆಸ್ಕ್, ಮೆಸ್ಕಾಂ, ಹೆಸ್ಕಾಂ, ಜೆಸ್ಕಾಂ.